/.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕರ್ನಾಟಕ ವಾಣಿಜ್ಯ ಶಿಕ್ಷಣ ಮತ್ತು ಗಣಕಯಂತ್ರ ಶಿಕ್ಷಣ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

ಓದಲಾಗಿದೆ:1 - ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 135 ಎಸ್‌ಓಹೆಚ್ 2011 ದಿ:28.05.2013.

2 ಸರ್ಕಾರದ ಆದೇಶ ಸಂಖ್ಯೆ:ಇಡಿ 2 ಎಲ್‌ಸಿಇ 2004 ದಿನಾಂಕ:09.08.2005.

3 ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆ ಸಂಖ್ಯೆ:ವಾಶಿ-50:ಅನುದಾನಜಿದುಗದೆ:ವಾಶಿ:ಮ:ರಚನೆ:2014-15 ದಿ:09.12.2014.

** ** **

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮಾಂಕ[1]ರ ಸರ್ಕಾರದ ಅಧಿಸೂಚನೆಯನ್ವಯ ಸಲಹಾ ಮಂಡಳಿಯನ್ನು ರಚಿಸಲು ಆದೇಶಿಸಿದ್ದು, ಸದರಿ ಸಲಹಾ ಮಂಡಳಿಯ ಅವಧಿಯು ಮುಗಿದಿರುತ್ತದೆ. ಪ್ರಸ್ತಾಪಿತ ಅಧಿಸೂಚನೆಯಲ್ಲಿ ವಾಣಿಜ್ಯ ಶಾಲೆಗಳಲ್ಲಿ ಬೆರಳಚ್ಚು ಮತ್ತು ಶೀಘ್ರಲಿಪಿ ವಿಷಯಗಳ ಜೊತೆಯಲ್ಲಿ ಗಣಕಯಂತ್ರ ಶಿಕ್ಷಣ ಬೋಧಿಸಲು ನಿಯಮಗಳನ್ನು ರಚಿಸುವ ಸಂಬಂಧ , ಕ್ರಮಾಂಕ[2]ರಂತೆ ಮಂಡಳಿಯನ್ನು ರಚಿಸಿದ್ದು, ಸದರಿ ಮಂಡಳಿಯ ಅವಧಿ ಮುಗಿದ ನಂತರ ಮಂಡಳಿ ಪುನರ್ ರಚನೆಯಾಗದ ಪ್ರಯುಕ್ತ, ಕ್ರಮಾಂಕ[3]ರಲ್ಲಿ ಆಯುಕ್ತರು,ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ಕರ್ನಾಟಕ ವಾಣಿಜ್ಯ ಶಿಕ್ಷಣ ಮತ್ತು ಗಣಕಯಂತ್ರ ಶಿಕ್ಷಣ ಸೇರ್ಪಡೆಯೊಂದಿಗೆ ಮಂಡಳಿಯನ್ನು ಪುನರ್ ರಚಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಅದರಂತೆ ಈ ಕೆಳಕಂಡ ಆದೇಶ.

### ಸರ್ಕಾರದ ಆದೇಶ ಸಂಖ್ಯೆ: ಇಡಿ 56ಎಸ್‌ಓಹೆಚ್ 2015

### ದಿನಾಂಕ:04ನೇ ಏಪ್ರಿಲ್ 2015

Hub 8/4/15

ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಸರ್ಕಾರದ ಆದೇಶ ಸಂಖ್ಯೆ:ಇಡಿ2 ಎಲ್‌ಸಿಇ 2004 ದಿನಾಂಕ:09.08.2005ನ್ನು ರದ್ದುಪಡಿಸಿ, ನಿರ್ದೇಶಕರು(ಪ್ರೌಢಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರ ಶಿಫಾರಸ್ಸಿನಂತೆ ವಾಣಿಜ್ಯ ಶಿಕ್ಷಣದ ಮತ್ತು ಗಣಕಯಂತ್ರದ ಶಿಕ್ಷಣದ ಬಗ್ಗೆ ಪಠ್ಯವಸ್ತುವಿನ ರಚನೆ, ಪರಿಷ್ಕರಣೆ, ಪರೀಕ್ಷಾ ವಿಧಾನ, ಬೋಧಕರ ವಿದ್ಯಾರ್ಹತೆ, ವೇತನ ಎಲ್ಲವುಗಳನ್ನು ಕಾಲ್ಕಾಲಕ್ಕೆ ನಿಗಧಿಪಡಿಸುವುದು. ವಿದ್ಯಾರ್ಥಿಗಳ ವಿದ್ಯಾರ್ಹತೆ, ಬೋಧನಾ ಶುಲ್ಕ/ಪರೀಕ್ಷಾ ಶುಲ್ಕದ ನಿಗಧಿಪಡಿಸುವಿಕೆ//ಪರಿಷ್ಕರಣೆ ನೋಂದಣಿ, ಮಾನ್ಯತೆ ಹಾಗೂ ವಾಣಿಜ್ಯ ಮತ್ತು ಗಣಕಯಂತ್ರ ಶಾಲೆಗಳ ಸಂಘದ ಬೇಡಿಕೆಗಳ ಬಗ್ಗೆ ಮತ್ತು ಇತರ ವಿಷಯಗಳ ಬಗ್ಗೆ ಇಲಾಖೆಗೆ ಸಲ್ಲಿ

ಮಾರ್ಗದರ್ಶನ ಸಲಹೆಗಳನ್ನು ನೀಡಲು ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡ ಕರ್ನಾಟಕ ವಾಣಿಜ್ಯ ಶಿಕ್ಷಣ ಮತ್ತು ಗಣಕಯಂತ್ರ ಶಿಕ್ಷಣ ಮಂಡಳಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಪುನರ್ ರಚಿಸಲಾಗಿದೆ.

| | | |
|---|---|---|
| 01. | ನಿರ್ದೇಶಕರು(ಪ್ರೌಢಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಅಧ್ಯಕ್ಷರು |
| 02. | ನಿರ್ದೇಶಕರು (ಇತರೆ ಪರೀಕ್ಷೆಗಳು) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ | ಉಪಾಧ್ಯಕ್ಷರು |
| 03. | ರಾಜ್ಯ ಸರ್ಕಾರದ 'ಇ' ಗವರ್ನನ್ಸ್ ಕಾರ್ಯದರ್ಶಿಗಳ ಪ್ರತಿನಿಧಿ–ಉಪಕಾರ್ಯದರ್ಶಿಗಳ ರ್‍ಯಾಂಕ್‌ಗೆ ಕಡಿಮೆ ಇಲ್ಲದಂತೆ | ಸದಸ್ಯರು |
| 04. | ವಿಭಾಗೀಯ ಸಹನಿರ್ದೇಶಕರು,, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಅಥವಾ ಅವರ ಪ್ರತಿನಿಧಿ | ಸದಸ್ಯರು |
| 05. | ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ ಅಥವಾ ಅವರ ಪ್ರತಿನಿಧಿ | ಸದಸ್ಯರು |
| 06. | ವಿಭಾಗೀಯ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾಂ ವಿಭಾಗ ಅಥವಾ ಅವರ ಪ್ರತಿನಿಧಿ | ಸದಸ್ಯರು |
| 07. | ವಿಭಾಗೀಯ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ವಿಭಾಗ ಅಥವಾ ಅವರ ಪ್ರತಿನಿಧಿ | ಸದಸ್ಯರು |
| 08. | ಕಿಯೋನಿಕ್ಸ್ ಗಣಕ ಶಿಕ್ಷಣ ತರಬೇತಿ ಸಂಸ್ಥೆ, ಬೆಂಗಳೂರು ಇದರ ಒಬ್ಬರು ಪ್ರತಿನಿಧಿ | ಸದಸ್ಯರು |
| 09. | ಅಧ್ಯಕ್ಷರು, ಕರ್ನಾಟಕ ವಾಣಿಜ್ಯ ವಿದ್ಯಾಶಾಲೆಗಳ ಸಂಘ, ವಿಜಯಲಕ್ಷ್ಮಿ ಕಟ್ಟಡ, ಮಹಮಡನ್ ಬ್ಲಾಕ್, ಮಲ್ಲೇಶ್ವರಂ, ಬೆಂಗಳೂರು. | ಸದಸ್ಯರು |
| 10. | ಅಧ್ಯಕ್ಷರು, ಕರ್ನಾಟಕ ಶೀಘ್ರಲಿಪಿ ಬರಹಗಾರರ ಸಂಘ, ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಕೆ.ಜಿ.ರಸ್ತೆ, ಬೆಂಗಳೂರು-9 | ಸದಸ್ಯರು |
| 11. | ಶ್ರೀ.ಪ್ರಸನ್ನ ಕುಮಾರ್, ಪ್ರಾಂಶುಪಾಲರು, ಮಾರುತಿ ವಾಣಿಜ್ಯ ಮತ್ತು ಗಣಕಯಂತ್ರಶಾಲೆ, #768, ಬಳೇಪೇಟೆ, ಎಂ.ಜಿ.ರಸ್ತೆ, 4ನೇ ಕ್ರಾಸ್, ರಾಮನಗರ | ಸದಸ್ಯರು |
| 12. | ಶ್ರೀ.ಕೇಶವಮೂರ್ತಿ ಪಿ, ಪ್ರಾಂಶುಪಾಲರು, ಲಕ್ಷ್ಮೀವೆಂಕಟೇಶ್ವರ ವಾಣಿಜ್ಯ ವಿದ್ಯಾಶಾಲೆ, ರಾಘವೇಂದ್ರನಗರ ಮೈಸೂರು ಜಿಲ್ಲೆ. | ಸದಸ್ಯರು |
| 13. | ಶ್ರೀ.ಪಂಕಜಕುಮಾರ್ ಜೋಷಿ, ಪ್ರಾಂಶುಪಾಲರು, ಯಶ್ ಕಂಪ್ಯೂಟರ್ಸ್ 4-3-3 ಎಸ್.ಬಿ.ಪೇಟ್ ರಸ್ತೆ, ಶೋರಾಪುರ ಜಿಲ್ಲೆ, ಯಾದಗಿರಿ-58224, ಕಲಬುರಗಿ ಜಿಲ್ಲೆ | ಸದಸ್ಯರು |
| 14. | ಶ್ರೀ.ಅರುಣ ಹನುಮಶೆಟ್ಟ್, ಪ್ರಾಂಶುಪಾಲರು, ಉದಯ ವಾಣಿಜ್ಯ ಹಾಗೂ ಗಣಕಯಂತ್ರ ಶಾಲೆ, ಬಸ್ ನಿಲ್ದಾಣದ ಹತ್ತಿರ, ಬೈಲಹೊಂಗಲ, ಬೆಳಗಾಂ ಜಿಲ್ಲೆ | ಸದಸ್ಯರು |
| 15. | ಹಿರಿಯ ಸಹಾಯಕ ನಿರ್ದೇಶಕರು (ವಾಣಿಜ್ಯ ಶಿಕ್ಷಣ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು. | ಸದಸ್ಯರು |

ಮೇಲ್ಕಂಡ ಕರ್ನಾಟಕ ವಾಣಿಜ್ಯ ಶಿಕ್ಷಣ ಮತ್ತು ಗಣಕಯಂತ್ರ ಶಿಕ್ಷಣ ಮಂಡಳಿಯ ಸದಸ್ಯರುಗಳ ಅವಧಿ, ಕಾರ್ಯಶೀಲತೆ ಮತ್ತು ಜವಾಬ್ದಾರಿಗಳ ಬಗ್ಗೆ ಈ ಕೆಳಕಂಡಂತೆ ವಿವರಿಸಿದೆ.

1. ವಾಣಿಜ್ಯ ಶಿಕ್ಷಣದ ಮತ್ತು ಗಣಕಯಂತ್ರದ ಶಿಕ್ಷಣದ ಬೆಳವಣಿಗೆಯ ಬಗ್ಗೆ ಹಾಗೂ ಕಾರ್ಯನೀತಿಯ ಬಗ್ಗೆ ಇಲಾಖೆಗೆ ಮಾರ್ಗದರ್ಶನ ನೀಡುವುದು.

2. ವಾಣಿಜ್ಯ ಶಿಕ್ಷಣದ ಮತ್ತು ಗಣಕಯಂತ್ರದ ಶಿಕ್ಷಣದ ಎಲ್ಲಾ ರೀತಿಯ ಶುಲ್ಕ ನಿಗಧಿಗೊಳಿಸುವ ಬಗ್ಗೆ ಮಾಗರ್ದಶನ ನೀಡುವುದು.

3. ವಾಣಿಜ್ಯ ಶಿಕ್ಷಣದ ಮತ್ತು ಗಣಕಯಂತ್ರದ ಶಿಕ್ಷಣದ ಶಾಲೆಗಳಿಗೆ ಅನುಮತಿ,ಮಾನ್ಯತೆ, ಬೋಧಕರ ನೇಮಕಾತಿ ಪರೀಕ್ಷೆಗಳ ಸಮಾನತೆಯ ಬಗ್ಗೆ ಮಾರ್ಗದರ್ಶನ ನೀಡುವುದು.

4. ಆವಶ್ಯಕ ಪಠ್ಯಪುಸ್ತಕ ಪರಾಮರ್ಶೆ, ಪಠ್ಯಗಳು ಮತ್ತು ಪುಸ್ತಕಗಳ ಅನುಮೋದನೆ ಮತ್ತು ಪ್ರಕಟಣೆಗೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡುವುದು.

5. ವಾಣಿಜ್ಯ ಶಿಕ್ಷಣದ ಮತ್ತು ಗಣಕಯಂತ್ರದ ಶಿಕ್ಷಣದ ಸಮಸ್ಯೆಗಳು, ಬೇಡಿಕೆಗಳನ್ನು ಪರಿಶೀಲಿಸಿ, ಇಲಾಖೆಗೆ ಸೂಕ್ತ ಮಾರ್ಗದರ್ಶನ ನೀಡುವುದಲ್ಲದೆ

6. ವಾಣಿಜ್ಯ ಶಿಕ್ಷಣದ ಮತ್ತು ಗಣಕಯಂತ್ರದ ಶಿಕ್ಷಣದ ಸಭೆಯನ್ನು ವರ್ಷದಲ್ಲಿ 2 ಬಾರಿ ಸಾರ್ವಜನಿಕ ಶಿಕ್ಷಣ ಇಲಾಖೆ. ಕಛೇರಿಯಲ್ಲಿ ಅಥವಾ ಮಂಡಳಿಯು ನಿಗಧಿಗೊಳಿಸಲಾದ ಸ್ಥಳದಲ್ಲಿ ಸಭೆ ಕರೆದು ಈ ಮೇಲಿನ ವಿಷಯಗಳ ಮೇಲೆ ಚರ್ಚಿಸುವುದು

7. ಮಂಡಳಿಯ ಕಾಲಾವಧಿ 3 ವರ್ಷಗಳಾಗಿದ್ದು, ಖಾಲಿಯಾಗುವ ಸದಸ್ಯರನ್ನು ಕಾಲಕಾಲಕ್ಕೆ ಅಧ್ಯಕ್ಷರ ಸಹಕಾರದೊಂದಿಗೆ ಹಾಗೂ ಸರ್ಕಾರದ ಅನುಮತಿ ಪಡೆದು ಭರ್ತಿ ಮಾಡುವುದು, ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಮಂಡಳಿಯ ಸಭೆಯಲ್ಲಿ ತೀರ್ಮಾನಿಸತಕ್ಕದ್ದು.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ.**

[ಎಂ. ಗಣೇಶ]
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ. [ಪ್ರೌಢ]

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು - ಕರ್ನಾಟಕ. (ಎ ಮತ್ತು ಇ) ಬೆಂಗಳೂರು.
2. ಆಯುಕ್ತರು. ಸಾರ್ವಜನಿಕ ಶಿಕ್ಷಣ ಇಲಾಖೆ. ಬೆಂಗಳೂರು.
3. ನಿರ್ದೇಶಕರು(ಪ್ರೌಢಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

4. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
5. ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
6. ಎಲ್ಲಾ ಉಪನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
7. ಸಂಬಂಧಪಟ್ಟ ಎಲ್ಲಾ ಸದಸ್ಯರುಗಳಿಗೆ–ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮುಖಾಂತರ
8. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ 56 ~~ಪಿಜಿಸಿ~~ SOH 2015.

ಕರ್ನಾಟಕ ಸರ್ಕಾರ ಸಚಿವಾಲಯ,
ಬಹು ಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:08/05/2015.

## ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ:ಇಡಿ 56 ಎಸ್‌ಓಎಚ್ 2015; ದಿನಾಂಕ:04/04/2015 ರಲ್ಲಿ ಪುಟ ಸಂಖ್ಯೆ:02 ರಲ್ಲಿರುವ ಕೋಷ್ಟಕದ ಕ್ರಮ ಸಂಖ್ಯೆ:02 ರಲ್ಲಿ 'ಉಪಾಧ್ಯಕ್ಷರು' ಎಂದು ಇರುವುದನ್ನು 'ಸದಸ್ಯರು' ಎಂದು ಮತ್ತು ಕ್ರಮ ಸಂಖ್ಯೆ:15 ರಲ್ಲಿ 'ಸದಸ್ಯರು' ಎಂದು ಇರುವುದನ್ನು 'ಸದಸ್ಯ ಕಾರ್ಯದರ್ಶಿ' ಎಂದು ಮತ್ತು ತಿದ್ದಿ ಓದಿಕೊಳ್ಳತಕ್ಕದ್ದು.

(ಎಂ.ಗಣೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರೌಢ)

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಎ&ಇ), ಬೆಂಗಳೂರು
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ನಿರ್ದೇಶಕರು (ಪ್ರೌಢ ಶಿಕ್ಷಣ), ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು
5. ನಿರ್ದೇಶಕರು, ಉರ್ದು ಮತ್ತು ಇತರ ಅಲ್ಪಸಂಖ್ಯಾತ ಭಾಷಾ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
6. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ
7. ಸಂಬಂಧಪಟ್ಟ ಎಲ್ಲಾ ಸದಸ್ಯರಿಗೆ– ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮುಖಾಂತರ
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು